ಇಲ್ಲವಾಗಿಸುವ ಕಡೆಗೆ ಸಾಗುತ್ತವೆ. ಕೆವಿಎನ್ ಅವರು ಅತ್ಯಂತ ಮಹತ್ವದ ಪ್ರಶ್ನೆಗಳನ್ನು ಈ ಚರ್ಚೆಗಳ ಮೂಲಕ ಮುನ್ನೆಲೆಗೆ ತರುತ್ತಿದ್ದಾರೆ. ಅಭಿವೃದ್ಧಿ, ಆಧುನೀಕರಣ, ಅಣೆಕಟ್ಟು ಮೊದಲಾದ ಕಾರ್ಪೊರೇಟ್ ಹಿತಾಸಕ್ತಿಗಳ ಬೆಳವಣಿಗೆಯ ಪರಿಣಾಮವಾಗಿ ಎತ್ತಂಗಡಿಯಾದಂತಹ ಸಮುದಾಯಗಳು ತಮ್ಮ ನುಡಿಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಅಂತಹ ನುಡಿಗಳನ್ನು ಕಾಪಿಟ್ಟು, ಸಮುದಾಯಗಳ ಬದುಕನ್ನು ಕಡೆಗಣಿಸಿದರೆ, ಏನು ಪ್ರಯೋಜನ?

ತಾರತಮ್ಯದ ತಳಹದಿಯ ಮೇಲೆ ರೂಪುಗೊಂಡಿಲ್ಲದ ವೈವಿಧ್ಯಕ್ಕೆ ಮಾತ್ರ ನಿರಂತರವಾಗಿ ಉಳಿದುಕೊಳ್ಳಲು ನೈತಿಕ ಹಕ್ಕಿರಲು ಸಾಧ್ಯ. ಆದರೆ ಹಾಗಿಲ್ಲದಿರುವ ವೈವಿಧ್ಯಗಳನ್ನು, ಅಂದರೆ ತಾರತಮ್ಯವನ್ನು ಆಧರಿಸಿ ಮೈದಳೆದಿರುವ ವೈವಿಧ್ಯಗಳನ್ನು ಕಾಯ್ದುಕೊಳ್ಳಬೇಕೆಂದು ಮುಂದಾಗುವುದು ಸರಿಯಾಗಲಾರದು (ಉದಾಹರಣೆಗೆ, ಜಾತಿ ವ್ಯವಸ್ಥೆ). ಜನ ಬದುಕಲೆಂದು ಭಾಷೆಯೇ ಹೊರತು ಭಾಷೆಗಾಗಿಯೇ ಜನರಲ್ಲ. ಸಮುದಾಯ ಮತ್ತು ನುಡಿಗಳನ್ನು ಬೇರೆ ಮಾಡಿ ನೋಡುವುದರಿಂದ ಹುಟ್ಟಿಕೊಳ್ಳುವ ಪ್ರಶ್ನೆಗಳು ಹಲವು. ಸಮುದಾಯಗಳ ಬದುಕು ಹಸನಾಗುವ ದಾರಿಗಳನ್ನು ಕಟ್ಟುವ ಗುರಿ ನಮಗೆ ಮುಖ್ಯವೇ ಹೊರತು ಅವರ ನುಡಿಗಳ ಬಗೆಗೆ ಮಾತ್ರ ಚಿಂತಿತರಾಗುವುದಲ್ಲ. ಇಂತಹ ಪ್ರಸಂಗಗಳಲ್ಲಿ ಬಹುತ್ವವನ್ನು ಕಾಯ್ದುಕೊಳ್ಳುವ ಮಾತನ್ನು ಸರಿಯಾದ ಚೌಕಟ್ಟಿನಲ್ಲಿ ಗ್ರಹಿಸದೇ ಹೋದರೆ ತಪ್ಪು ಹೆಜ್ಜೆಗಳನ್ನು ಇರಿಸುವ ಸಾಧ್ಯತೆಗಳಿರುತ್ತವೆ. ನುಡಿವೈವಿಧ್ಯ ಮತ್ತು ಜೀವವೈವಿಧ್ಯ ಇವೆರಡೂ ಜೊತೆ ಜೊತೆಯಾಗಿವೆ ಎಂದ ಮಾತ್ರಕ್ಕೆ ಅವೆರಡರ ನಡುವೆ ಬಿಡಿಸಲಾಗದ ನಂಟು ಇದೆ ಎನ್ನಲಾಗದು. ನಾಡಿನ ಪ್ರಗತಿಗೂ ನುಡಿಗಳ ಬಹುತ್ವಕ್ಕೂ ನೇರವಾದ ನಂಟು ಇಲ್ಲ.

ಸಮುದಾಯವು ನುಡಿಯನ್ನು ತನ್ನ ದಿನನಿತ್ಯದ ವ್ಯವಹಾರಗಳಿಗಾಗಿ ಮಾತ್ರವಲ್ಲದೆ ತನ್ನ ಅಭಿವೃದ್ಧಿಯ ಸಾಧನವಾಗಿಯೂ ಬಳಸುತ್ತದೆ ಎಂದಾದರೆ ಆಗ ನುಡಿಯನ್ನು ಸಮುದಾಯದ ಸಾಂಸ್ಕೃತಿಕ ಬಂಡವಾಳ ಎನ್ನಬಹುದು. ಇದು ನಿಜವಾಗುವುದು ಅಧಿಕಾರ ಸಂಬಂಧದಲ್ಲಿ ಮೇಲುಗೈ ಪಡೆದ ಸಮುದಾಯಗಳ ವಿಷಯದಲ್ಲಿ ಮಾತ್ರ. ಉದಾಹರಣೆಗೆ, ಇಂಗ್ಲಿಷ್ ನುಡಿಯನ್ನು ಮೊದಲ ನುಡಿಯನ್ನಾಗಿ ಪಡೆದ ಸಮುದಾಯವು ವಸಾಹತು ಆಳ್ವಿಕೆಯ ಮೂಲಕ ಮತ್ತು ಮಾರುಕಟ್ಟೆಯ ಪ್ರಭಾವದ ಮೂಲಕ ಜಗತ್ತಿನ ಹಲವು ಸಮಾಜಗಳ ಮೇಲೆ ಪ್ರಭಾವ ಬೀರುವುದು ಸಾಧ್ಯವಾಗಿದೆ. ಅಳಿಯುತ್ತಿರುವ ನುಡಿಗಳು ಈಗಾಗಲೇ ಅಧಿಕಾರ ಸಂಬಂಧದಿಂದ ಹೊರಗೆ ಉಳಿದಿರುವ ನುಡಿಗಳು. ಇಂತಹ ನುಡಿಗಳನ್ನು ಆಡುವ ಸಮುದಾಯಗಳು ಸಾಮಾಜಿಕ, ಆರ್ಥಿಕ ನೆಲೆಯಲ್ಲಿ ಪೈಪೋಟಿಯನ್ನು ಮಾಡಲಾರದ ಸ್ಥಿತಿಯಲ್ಲಿರುತ್ತವೆ. ಅವುಗಳ ನುಡಿ ಆ ಸಮುದಾಯಗಳ ಸಾಂಸ್ಕೃತಿಕ ಬಂಡವಾಳ ಎನ್ನುವುದು ಒಂದು ಕಟಕಿಯೇ ಸರಿ. ಈ ಸಮುದಾಯಗಳ ಅಧಿಕಾರ ಸಂಬಂಧದಲ್ಲಿ ಬದಲಾವಣೆ ತರದೇ ಕೇವಲ ಅವುಗಳ ನುಡಿಯನ್ನು ಕಾಪಾಡುವ ಯತ್ನಗಳು ನಿರುಪಯುಕ್ತವೇ ಸರಿ. ನುಡಿ ಸಮುದಾಯಗಳ ಬದುಕನ್ನು ಕಾಪಿಡುವ ಯತ್ನಗಳನ್ನು ಮಾಡದೆ, ತಕ್ಕ ಕಾರ್ಯಯೋಜನೆಗಳನ್ನು ರೂಪಿಸಿ ಜಾರಿಗೆ ಕೊಡದೆ ಅವುಗಳನ್ನು ಬಳಸುತ್ತಿರುವ ನುಡಿಗಳ ಬಗೆಗೆ ಕಾಳಜಿಯನ್ನು ತೋರುವುದು ಒಂದು ವಿಪರ್ಯಾಸವೇ ಸರಿ. ಈ ಚರ್ಚೆಗಳ ಮುಖ್ಯ ಕಾಳಜಿ ಕೇವಲ ನುಡಿಯಾಗಿರದೇ ಆ ನುಡಿಯನ್ನು ಮಾತನಾಡುವ ಸಮುದಾಯದ ಬದುಕಿನ ಏಳಿಗೆಯನ್ನು ಬಯಸುವುದಾಗಿದೆ.

### 3

ನುಡಿ ಅಳಿವಿನ ಸುತ್ತ ಹೆಣೆದುಕೊಂಡಿರುವ ಹಲವು ಬಗೆಯ ಗ್ರಹಿಕೆ, ಅಭಿಪ್ರಾಯ ಮತ್ತು ಅಪಕಲ್ಪನೆಗಳನ್ನು ಕುರಿತ ಚರ್ಚೆಗಳು ಅತ್ಯಂತ ಖಚಿತವಾದ ವಿಶ್ಲೇಷಣೆಗಳಿಗೆ ಒಳಪಟ್ಟಿರುತ್ತವೆ. ಸಾಂಸ್ಕೃತಿಕ ನೆನಪು, ಲೋಕದೃಷ್ಟಿ ಮತ್ತು ತಿಳಿವಳಿಕೆ – ಇವುಗಳ ನಡುವಣ ನಂಟನ್ನು ಅರ್ಥೈಸುವ ಮೂಲಕ ಅವುಗಳ ತಾತ್ವಿಕತೆಯನ್ನು ಪ್ರಚುರಪಡಿಸುವ ನೆಲೆಗಳು ಇಲ್ಲಿ ಪರಿಣಾಮಕಾರಿಯಾಗಿ ಒಡಮೂಡಿರುತ್ತವೆ. ಒಟ್ಟಿನಲ್ಲಿ, ಈ ಪುಸ್ತಕದ ಚರ್ಚೆಗಳು ನುಡಿ ಅಳಿವಿನ ಕುರಿತ ಅಪಕಲ್ಪನೆಗಳ ಸ್ವರೂಪವನ್ನು ಬಿಡಿಸಿ ತೋರಿಸುವ ಹಾಗೂ ಅವುಗಳಿಗೆ ಕಾರಣವಾಗಿರುವ ವೈಚಾರಿಕ ದೃಷ್ಟಿಕೋನಗಳನ್ನು ನಿರ್ವಚಿಸಲಾಗಿದೆ. ನುಡಿ ಬಗೆಗಿನ ಧಾರ್ಮಿಕ ನಿಲುವುಗಳು ಮತ್ತು ಈ